ಸಂಯುಕ್ತ ಕರ್ನಾಟಕ
ಹುಬ್ಬಳ್ಳಿ–ಬೆಂಗಳೂರು

ನಿಮ್ಮೂರಲ್ಲಿ - ನಮ್ಮವರು

ನಮ್ಮ ಪ್ರಕಟಣೆಗಳಾದ 'ಸಂಯುಕ್ತ ಕರ್ನಾಟಕ' ದಿನಪತ್ರಿಕೆ, 'ಕರ್ಮವೀರ' ವಾರಪತ್ರಿಕೆ ಹಾಗೂ 'ಕಸ್ತೂರಿ' ಮಾಸ ಪತ್ರಿಕೆ ಬೇಕಾದಲ್ಲಿ ಹಾಗೂ ಚಂದಾದಾರಾಗಲು ದಯವಿಟ್ಟು ಈ ಕೆಳಗಿನ ಪ್ರತಿನಿಧಿಗಳನ್ನು ಸಂಪರ್ಕಿಸಿ.

ಪ್ರಸಾರಾಂಗ
ಮಲ್ಲಿಕಾರ್ಜುನ ಕೆ. 91085 14014
ಪ್ರಸಾರಾಂಗ ವಿಭಾಗ, ಹುಬ್ಬಳ್ಳಿ 0836/2364305
ಹಿರಿಯ ಪ್ರಸಾರಾಂಗ ವ್ಯವಸ್ಥಾಪಕರು 76250 66319

ಜಾಹೀರಾತುಗಳಿಗಾಗಿ
ಪರಮೇಶ ರೆಡ್ಡಿ 95902 76300

ಸುದ್ದಿಗಳಿಗಾಗಿ
ಬಳ್ಳಾರಿ : ಮಲ್ಲಿಕಾರ್ಜುನ 99020 08424
ಹೊಸಪೇಟೆ : ಕೆ. ಲಕ್ಷ್ಮಣ 94492 04302
ಗೋವಾ : ಪ್ರಕಾಶ ಭಟ್ 98609 98528

ತುಂಗಭದ್ರಾ ಹಿನ್ನೀರಿನಲ್ಲಿ ಮಕ್ಕಳಿಗಾಗಿ ತಾಯಂದಿರ ಕಣ್ಣೀರಿನ ಆಕ್ರಂದನ । ಗಂಗಾಪೂಜೆ ಮುಗಿಸಿ ಬಂದವರಿಗೆ ದುರಂತ ಸುದ್ದಿ

ಗಂಗವ್ವ ಕರೆಸಿಕೊಂಡ ಮಕ್ಕಳನ್ನು ಕಳುಹಿಸಿಕೊಡಿ...

■ ಮಂಜುನಾಥ್ ಪಟ್ಟಣಶೆಟ್ಟಿ

ಸಂಕ ಸಮಾಚಾರ ತಂಬ್ರಹಳ್ಳಿ: ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ತಂಬ್ರಹಳ್ಳಿಯ ತುಂಗಭದ್ರಾ ಹಿನ್ನೀರಿನ ದಡದಲ್ಲಿ ಮೀನು ಹಿಡಿಯಲು ಹೋದ ಮಡಿವಾಳರ ಅಜ್ಜಪ್ಪ(30) ಈತನ ಇಬ್ಬರು ಸಹೋದರರಾದ ಮಡಿವಾಳರ ಯಮನೂರ್(24) ಮಡಿವಾಳರ ರಾಜು(27) ನೀರು ಪಾಲಾಗಿರುವ ಘಟನೆ ಮಂಗಳವಾರ ಸಂಜೆ ನಡೆದಿದೆ.

ಸ್ಥಳೀಯ ಮೀನುಗಾರರ ಸಹಾಯದೊಂದಿಗೆ ಅಗ್ನಿ ಶಾಮಕ ದಳ ಮತ್ತು ಗುಲ್ಬರ್ಗಾ ವಿಭಾಗದ ಎಸ್‌ಡಿಆರ್‌ಎಫ್ ತಂಡ ನಾಪತ್ತೆಯಾಗಿರುವ ಯುವಕರಿಗಾಗಿ ಶೋಧ ನಡೆಸುತ್ತಿದ್ದರೆ, ಮತ್ತೊಂದೆಡೆ ಕುಟುಂಬಸ್ಥರ ಕಣ್ಣೀರು, ಆಕ್ರಂದನ ಮುಗಿಲು ಮುಟ್ಟಿತ್ತು. ಮಕ್ಕಳಿಗಾಗಿ ತಾಯಂದಿರು ಗೋಳಾಡುತ್ತಿದ್ದ ದೃಶ್ಯ ಸ್ಥಳದಲ್ಲಿದ್ದವರ ಮನಕಲಕುವಂತಿತ್ತು.

ತಂಬ್ರಹಳ್ಳಿ ಗ್ರಾಮದ ಮಡಿವಾಳರ ಅಜ್ಜಪ್ಪ ಅವರ ತಾಯಿ ಶಾಂತಮ್ಮ ಮತ್ತು ಮರಿಯಪ್ಪ ಮಗನಿಗಾಗಿ ಕಣ್ಣೀರಿಡುತ್ತಾ, ಗಂಗಾಮಾತೆ ನಮ್ಮ ಮಗ ಅಜ್ಜಪ್ಪನನ್ನು ಕರೆಸಿಕೊಂಡಳಾ? ಕೈಕಾಲು ಮುರಿದಿದ್ದರೇ.. ನಾನು ಜೋಪಾನ ಮಾಡಿ ಸಾಕುತ್ತಿದ್ದೆ. ನನ್ನ ಮಗನನ್ನು ಹುಡುಕಿಕೊಡಿ...ಎಂದು ಬೋರಾಡಿ ಅಳುತ್ತಾ ಗೋಳಾಡಿದರು. ಮಗನ ಸುಳಿವಿಗಾಗಿ ನದಿ ದಡದತ್ತ ಕಣ್ಣಿಟ್ಟು ಕುಳಿತಿದ್ದ ತಾಯಿಯ ಸಂಬಂಧಿಕರ ರೋದನ ನೋಡುಗರ ಕಣ್ಣಲ್ಲೂ ನೀರು ತರಿಸಿತು.

ಇನ್ನೊಂದೆಡೆ, ಸಹೋದರರಾದ ಮಡಿವಾಳರ ಯಮನೂರ್ ಹಾಗೂ ಮಡಿವಾಳರ ರಾಜು ನಾಪತ್ತೆಯಾಗಿರುವ ಸುದ್ದಿ ಕುಟುಂಬಕ್ಕೆ ಬರಸಿಡಿಲಿನಂತೆ ಬಡಿದಿದೆ. ಇಬ್ಬರು ಮಕ್ಕಳನ್ನು ಕಳೆದುಕೊಂಡಿರುವ ತಾಯಿ ಲಕ್ಷ್ಮವ್ವ ಹಾಗೂ ತಂದೆ ಚಂದ್ರಪ್ಪ ಅವರ ಗೋಳಾಟ ಮುಗಿಲು ಮುಟ್ಟಿತ್ತು. ಮನೆಯ ಮುಂದೆ ಕುಳಿತು ಮೀನ ಹಿಡಿಯಕಾಂತ ಹೋದವರು ಇನ್ನೂ ಬಂದಿಲ್ಲ ಹುಡುಕಿಕೊಡಿ ಎಂದು ಕಣ್ಣೀರಿಡುತ್ತಿದ್ದ ದೃಶ್ಯ ಮನಕಲಕುವಂತಿತ್ತು.

ನಾಗರ ಪಂಚಮಿಯ ಮೂರನೇ ದಿನ ತುಂಗಭದ್ರಾ ಹಿನ್ನೀರಿನ ಪ್ರದೇಶದಲ್ಲಿ ಗಂಗಾಪೂಜೆ ನೆರವೇರಿಸುವುದು ಈ ಭಾಗದ ಜನರ ಸಂಪ್ರದಾಯ. ಅದರಂತೆ ಕುಟುಂಬಸ್ಥರು ಹಾಗೂ ಗ್ರಾಮಸ್ಥರು ಪೂಜೆ ಮುಗಿಸಿ ಮನೆಗೆ ಮರಳುತ್ತಿದ್ದರೆ, ಸಾಯಂಕಾಲ ಮೀನು ಹಿಡಿಯಲು ತೆರಳಿದ್ದ ಮೂವರು ಯುವಕರು ಮಾತ್ರ ಮರಳಿ ಬಂದಿಲ್ಲ..

ಘಟನಾ ಸ್ಥಳಕ್ಕೆ ಜಿಲ್ಲಾ ಎಸ್.ಪಿ.ಜಾಹ್ನವಿ ಕೂಡ್ಲಿಗಿ ಡಿವೈಎಸ್ ಪಿ ಮಲ್ಲೇಶ್ ನಾಯ್ಕ್, ಹಬೊಹಳ್ಳಿ ಸಿಪಿಐ ವಿಕಾಸ್ ಲಮಾಣಿ, ತಹಸೀಲ್ದಾರ್ ಆರ್.ಕವಿತಾ ತಂಬ್ರಹಳ್ಳಿ, ಹಬೊಹಳ್ಳಿ ಮರಿಯಮ್ಮನಹಳ್ಳಿ, ಸುತ್ತಮುತ್ತಲಿನ ಪೋಲಿಸ್ ಠಾಣೆಯ ಸಿಬ್ಬಂದಿ ರಾಜ್ಯ ವಿಪತ್ತು ಸ್ಪಂದನ ಪಡೆ(ಎಸ್.ಡಿ.ಆರ್.ಎಫ್) ಗುಲ್ಬರ್ಗಾದ ಪಡೆಯ ಆರ್ ಪಿ ಐ ಅಮರೇಶ ಚೌವಾಣ್, ಹನುಮಂತಗೌಡ ಭೀಮಾರಾವ್ ಚೌಹಾಣ್,ಶಿವಾಜಿ ಚೌವಾಣ್, ತುಕರಾಂ ಚೌವಾಣ್ ತಂಡವು ಘಟನಾ ಸ್ಥಳಕ್ಕೆ ಆಗಮಿಸಿ ಸ್ಥಳೀಯರ ನೆರವಿನಿಂದ ಬುಧವಾರ ಬೆಳಿಗ್ಗೆಯಿಂದ ಸಂಜೆಯವರೆಗೂ ಶೋಧ ಕಾರ್ಯನಿರಂತರವಾಗಿ ನಡೆದರೂ ಎರಡೂ ಮೃತ ದೇಹಗಳು ಸುಳಿವು ದೊರೆಯಲಿಲ್ಲ ಗುರುವಾರ ಮತ್ತ ಶೋಧ ಕಾರ್ಯ ನಡೆಯಲಿದೆ ಎಂದು ಅಧಿಕಾರಿಗಳು ತಿಳಿಸಿದರು.

ದಡದಲ್ಲಿ ಶೋಧ : ಮನೆಗಳಲ್ಲಿ ಕಣ್ಣೀರು

ನದಿ ದಡದಲ್ಲಿ ರಕ್ಷಣಾ ಸಿಬ್ಬಂದಿ ಮೃತ ದೇಹಗಳನ್ನು ಹುಡುಕುತ್ತಿದ್ದರೆ, ಗ್ರಾಮದಲ್ಲಿ ಕುಟುಂಬಸ್ಥರು ಮಕ್ಕಳ ಸುಳಿವಿಗಾಗಿ ಕಾದು ಕುಳಿತಿದ್ದಾರೆ. ಒಂದೆಡೆ ಮಕ್ಕಳಿಗಾಗಿ ತಾಯಂದಿರ ಕಣ್ಣೀರು; ಮತ್ತೊಂದೆಡೆ ನದಿಯಲ್ಲಿ ಜೀವದ ಹಂಗು ತೊರೆದು ನಡೆಯುತ್ತಿರುವ ಶೋಧ– ತಂಬ್ರಹಳ್ಳಿಯ ನದಿ ಹಿನ್ನೀರು ಪ್ರದೇಶದಲ್ಲಿ ಬುಧವಾರ ಕಂಡುಬಂದ ಈ ದೃಶ್ಯ ಪ್ರತಿಯೊಬ್ಬರ ಹೃದಯ ಕಲಕುವಂತಿತ್ತು.

ಮಶಿನಿಸ್ಟ್ ತರಬೇತಿ

ಬಳ್ಳಾರಿ: ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಜಿಟಿಟಿಸಿ)ಯಲ್ಲಿ ಎಸ್‌ಎಸ್‌ಎಲ್‌ಸಿ ತೇರ್ಗಡೆಯಾದ ಅಭ್ಯರ್ಥಿಗಳಿಗೆ ಉಚಿತ 'ಟೂಲ್‌ರೂಮ್ ಮಶಿನಿಸ್ಟ್'ತಾಂತ್ರಿಕ ವೃತ್ತಿ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ 10 ಸೀಟುಗಳು ಮಾತ್ರ ಬಾಕಿ ಉಳಿದಿದ್ದು, ಆಸಕ್ತರು ಆ.21ರೊಳಗೆ ಅರ್ಜಿ ಸಲ್ಲಿಸಬೇಕು. 'ಮೊದಲು ಬಂದವರಿಗೆ ಮೊದಲ ಆದ್ಯತೆ'ಆಧಾರದ ಮೇಲೆ ಪ್ರವೇಶ ನೀಡಲಾಗುತ್ತದೆ.

ತರಬೇತಿಯಲ್ಲಿ ಫಿಟ್ಟರ್, ಟರ್ನರ್, ಮಿಲ್ಲರ್, ಸಿಎನ್‌ಸಿ, ಕ್ಯಾಡ್–ಕ್ಯಾಮ್ ಹಾಗೂ ಟೂಲ್ □□□ಂಡ್ ಡೈ ಮೇಕಿಂಗ್ ವಿಭಾಗಗಳಲ್ಲಿ ಪ್ರಾಯೋಗಿಕ ತರಬೇತಿ ನೀಡಲಾಗುತ್ತದೆ. ಇದರೊಂದಿಗೆ ಆಟೊಕ್ಯಾಡ್, ಕನ್ನಡ–ಇಂಗ್ಲಿಷ್ ಭಾಷಾ ಕೌಶಲ್ಯ ಹಾಗೂ ಉದ್ಯೋಗ ಕೌಶಲ್ಯಗಳನ್ನೂ ಕಲಿಸಲಾಗುತ್ತದೆ.

ತರಬೇತಿ ಪೂರ್ಣಗೊಳಿಸಿದವರಿಗೆ ಟೂಲಿಂಗ್, ವಿಮಾನ ತಯಾರಿಕೆ ಮತ್ತು ಆಟೋಮೊಬೈಲ್ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು. ಹೆಚ್ಚಿನ ಮಾಹಿತಿಗೆ ಜಿಟಿಟಿಸಿ, ಐಶ್ವರ್ಯ ಕಾಲೋನಿ, ಸರ್ಕಾರಿ ಐಟಿಐ ಕ್ಯಾಂಪಸ್, ರೇಡಿಯೊ ಪಾರ್ಕ್, ಬಳ್ಳಾರಿ ಅಥವಾ 08392–200087, 9620057086, 6361880236, 7795680677 ಸಂಪರ್ಕಿಸಬಹುದು.

ಆಪ್‌ನಲ್ಲಿ ಮಾಹಿತಿ ದಾಖಲಿಸಿ

ಬಳ್ಳಾರಿ: ಪ್ರಸಕ್ತ ಮುಂಗಾರು ಹಂಗಾಮಿನ ಬೆಳೆ ವಿವರಗಳನ್ನು ರೈತರು ತಮ್ಮ ಮೊಬೈಲ್‌ನಲ್ಲೇ ದಾಖಲಿಸಲು 'ಕ್ರಾಪ್ ಸರ್ವೇ ಖಾರೀಫ್ 2026'ಆಪ್ ಬಿಡುಗಡೆ ಮಾಡಲಾಗಿದೆ. ಸೆ.30ರೊಳಗೆ ರೈತರು ತಮ್ಮ ಜಮೀನಿನ ಬೆಳೆ ವಿವರಗಳನ್ನು ಆಪ್‌ನಲ್ಲಿ ದಾಖಲಿಸಬೇಕು ಎಂದು ಕೃಷಿ ಇಲಾಖೆ ತಿಳಿಸಿದೆ.

ಬೆಳೆ ಪರಿಹಾರ, ಬೆಳೆ ಹಾನಿ ವರದಿ, ಬೆಳೆ ವಿಮೆ, ಕನಿಷ್ಠ ಬೆಂಬಲ ಬೆಲೆ, ಆರ್‌ಟಿಸಿ ದಾಖಲಾತಿ ಹಾಗೂ ಬೆಳೆ ಸಾಲ ಸೇರಿದಂತೆ ವಿವಿಧ ಸೌಲಭ್ಯಗಳಿಗೆ ಬೆಳೆ ಸಮೀಕ್ಷೆಯ ದತ್ತಾಂಶ ಪ್ರಮುಖವಾಗಿದೆ.

ಜಿಲ್ಲೆಯಲ್ಲಿ 3,65,493 ಜಿಯೋ–ರೆಫರೆನ್ಸ್ ಮತ್ತು ಡಿಜಿಟೈಸ್ಡ್ ಬೆಳೆ ತಾಕುಗಳಿದ್ದು, ರೈತರು ತಮ್ಮ ಜಮೀನಿನ ಗಡಿ ಪ್ರದೇಶಕ್ಕೆ ತೆರಳಿ ಜಿಪಿಎಸ್ ಆಧಾರಿತವಾಗಿ ಬೆಳೆಗಳ ಛಾಯಾಚಿತ್ರ ತೆಗೆದು ಸಮೀಕ್ಷೆ ಪೂರ್ಣಗೊಳಿಸಬೇಕು. ತಾಂತ್ರಿಕ ನೆರವಿಗಾಗಿ ಸಮೀಪದ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿಗಳನ್ನು ಸಂಪರ್ಕಿಸಬಹುದು.

ಮಹಿಳೆಯರ ಪ್ರತಿಭೆ ಉತ್ತೇಜಿಸಿ

ಬಳ್ಳಾರಿ : ಮಹಿಳೆಯರಿಗೆ ವೇದಿಕೆ ಕಲ್ಪಿಸುವ ಮೂಲಕ ಅವರಲ್ಲಿನ ಪ್ರತಿಭೆಗೆ ಹುಮ್ಮಸ್ಸು ತುಂಬುವ ಕೆಲಸ ನಾವು ಮಾಡುತ್ತಿದ್ದೇವೆ ಎಂದು ಟಚ್ ಫಾರ್ ಲೈಫ್ ಫೌಂಡೇಶನ್ನಿನ ನಿರ್ದೇಶಕಿ ನಾರಾ ವೈಜಯಂತಿ ರೆಡ್ಡಿ ಹೇಳಿದರು.ಮಂಗಳವಾರ ನಗರದ ಖಾಸಗಿ ಹೊಟೇಲಿನ ಸಭಾಂಗಣದಲ್ಲಿ ಫೌಂಡೇಶನ್ ವತಿಯಿಂದ ಏರ್ಪಡಿಸಿದ್ದ ಕಾಂತಿಯ ಹೊಸ ಕ್ರಾಂತಿ– ಒಂದು ದಿನದ ಪ್ರಸಾದನ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು. ಕಲಿಕಾರ್ಥಿಗಳ ಸಂಖ್ಯೆ ಹೆಚ್ಚಿರುವುದು ಕಂಡು ಬಂದಿದ್ದು, ಮುಂದಿನ ದಿನಗಳಲ್ಲಿ ಮತ್ತೊಂದು ಇದೇ ರೀತಿಯ ಕಾರ್ಯಾಗಾರ ಏರ್ಪಡಿಸಲಾಗುವುದು ಎಂದರು.

ಐದು ನೂರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಯುವತಿಯರು, ಗೃಹಿಣಿಯರು ಕಾರ್ಯಾಗಾರದಲ್ಲಿ ಭಾಗಿಯಾದರು. ಭಾಗಿಯಾದ ಕಲಿಕಾರ್ಥಿಗಳಿಗೆ ನಾರಾ ವೈಜಯಂತಿ ರೆಡ್ಡಿ ಅವರು ಪ್ರಮಾಣಪತ್ರ ಹಾಗೂ ಉಚಿತವಾಗಿ ಮೇಕಪ್ ಕಿಟ್ ನೀಡಲಾಯಿತು.ಪಾಲಿಕೆಯ ಸದಸ್ಯೆ, ಮಾಜಿ ಮೇಯರ್ ಎಂ.ರಾಜೇಶ್ವರಿ, ಪದ್ಮಾ, ಮಂಜುಳಾ, ಚಂಪಾ ಚವ್ಹಾಣ್, ಯಶೋದಾ, ಶಮೀಮ್ ಜಕ್ಲಿ, ಕವಿತಾ, ಜ್ಯೋತಿ, ನಸೀಮಾ, ಸಲ್ಮಾ ಎಸ್. ಕೆ, ಕೆ.ಎಂ.ಅಭಿನಯ, ಚಾನಾಳ್ ಲತಾ ಶಮಿಮ್ ಜೋಹರ ಮತ್ತಿತರರು ಹಾಗರಿದ್ದರು

ತೆಕ್ಕಲಕೋಟೆಯ ಜಡೆ ಶಂಕರಲಿಂಗ ದೇವಸ್ಥಾನದಲ್ಲಿ ಚಿಪ್ಪಿಗ ಸಮಾಜದ ವತಿಯಿಂದ ನಾಗರಪಂಚಮಿ ಹಾಗೂ ಶಂಕರದಾಸಿಮಯ್ಯ ಜಯಂತಿ ಆಚರಿಸಲಾಯಿತು.

ಶರಣರ ವಚನಗಳ ಮೌಲ್ಯ ಪಾಲಿಸಿ

ತೆಕ್ಕಲಕೋಟೆ: ಶರಣರ ವಚನಗಳಲ್ಲಿರುವ ಭಕ್ತಿ, ಕಾಯಕ, ದಾಸೋಹ, ಸತ್ಯ, ಸರಳ ಜೀವನ ಹಾಗೂ ನೈತಿಕ ಮೌಲ್ಯಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಸಿರುಗುಪ್ಪ ತಾಲ್ಲೂಕು ಚಿಪ್ಪಿಗ ಸಮಾಜ ಸಂಘದ ಅಧ್ಯಕ್ಷ ಎಸ್.ಪಿ. ವೀರೇಶ ಹೇಳಿದರು.

ಪಟ್ಟಣದ ಚಿಪ್ಪಿಗ ಸಮಾಜದ ವತಿಯಿಂದ ಜಡೆ ಶಂಕರಲಿಂಗ ದೇವಸ್ಥಾನದಲ್ಲಿ ಸೋಮವಾರ ಸಂಜೆ ಆಯೋಜಿಸಿದ್ದ ನಾಗರ ಪಂಚಮಿ ಹಾಗೂ ಶಂಕರದಾಸಿಮಯ್ಯ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ನಿವೃತ್ತ ಶಿಕ್ಷಕ ಮಲ್ಲಯ್ಯ ಮಾತನಾಡಿ, ಶಂಕರದಾಸಿಮಯ್ಯ ಅವರು ನೇಕಾರಿಕೆ ಕಾಯಕವನ್ನು ಕೇವಲ ಜೀವನೋಪಾಯವಾಗಿ ಪರಿಗಣಿಸದೆ, ಶಿವಸೇವೆಯ ಮಾರ್ಗವೆಂದು ಭಾವಿಸಿದ್ದರು. ದುಡಿಮೆಯ ಮೂಲಕ ಜೀವನ ನಡೆಸಬೇಕು ಹಾಗೂ ಗಳಿಸಿದ ಸಂಪತ್ತನ್ನು ಸಮಾಜದ ಒಳಿತಿಗಾಗಿ ಬಳಸಬೇಕು ಎಂಬ ಶರಣರ ತತ್ವವನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಿದ್ದರು ಎಂದು ಹೇಳಿದರು. ಎಸ್. ವೀರೇಂದ್ರ, ಪೊಂಪಣ್ಣ, ಶಿವಪ್ಪ ಎಸ್., ಷಣ್ಮುಖ ಎನ್.ಕೆ., ಎನ್.ಕೆ. ಸುಧಾಕರ, ಸುಧಾಮಣಿ, ನಿರ್ಮಲಮ್ಮ, ಪುಷ್ಪಾವತಿ, ವೀಣಾ, ಮಂಜುಳಾ, ಎಸ್. ಲತಾ ಸೇರಿದಂತೆ ಉಪಸ್ಥಿತರಿದ್ದರು.

ಅಂತರ್ಜಾಲದ ಬಳಕೆ ಅರಿವು

ಎಮ್ಮಿಗನೂರು : ಗ್ರಾಮದ ಸರಕಾರಿ ಮಾದರಿಯ ಪ್ರಾಥಮಿಕ ಶಾಲೆಯಲ್ಲಿ ಮಾಧ್ಯಮ ಮತ್ತು ಅಂತರ್ಜಾಲದ ಬಳಕೆ ಕುರಿತು ಅರಿವು ಕಾರ್ಯಕ್ರಮ ಜರುಗಿತು ಮುಖ್ಯ ಗುರು ಬಿಎಸ್ ಸದ್ಯೋಜಾತಪ್ಪ ಮಾತನಾಡಿ ಸಂವಹನ ಬೆಳೆಸುವಲ್ಲಿ ಮಾಧ್ಯಮಗಳು ಪ್ರಮುಖವಾಗಿದ್ದು, ಪ್ರಸಕ್ತವಾಗಿ ವಿದ್ಯಾರ್ಥಿಗಳು ಜ್ಞಾನಕ್ಕೆ ಸಂಬಂಧಪಟ್ಟಂತೆ ಬಳಕೆ ಮಾಡಿಕೊಳ್ಳೋ ಮೂಲಕ ಭವಿಷ್ಯದ ಸ್ಪರ್ಧಾತ್ಮಕ ಪರೀಕ್ಷೆಗೆ ಹಣಿಯಾಗಬೇಕು ಎಂದರು. ಶಿಕ್ಷಕರಾದ ಪಾಂಡುರಂಗ, ಶ್ರುತಿ, ಕವಿತಾ, ಎಸ್ ರಾಮಪ್ಪ, ಮೀನಾಕ್ಷಿ, ಲೋಕೇಶ ಸೇರಿದಂತೆ ಇತರರು ಇದ್ದರು

ರೈತರ ಪರ ಧ್ವನಿ ಎತ್ತಿದರೆ ಅಪರಾಧವೇ..

ಹೂವಿನಹಡಗಲಿ: ಕೆರೆಗೆ ನೀರು ತುಂಬಿಸುವ ವಿಷಯದಲ್ಲಿ ರೈತರ ಪರವಾಗಿ ಧ್ವನಿ ಎತ್ತಿದ ಪಿಟಿ ಪರಮೇಶ್ವರ ನಾಯ್ಕ ಅವರ ಕಾರ್ಯವೈಖರಿ ಟೀಕಿಸಿರುವ ಶಾಸಕರ ನಡೆ ಖಂಡನೀಯ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಬಿವಿ ಶಿವಯೋಗಿ ಹೇಳಿದರು.

ಪಟ್ಟಣದಲ್ಲಿ ಕಾಂಗ್ರೆಸ್ ಪಕ್ಷದಿಂದ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಅಧಿಕಾರಿಗಳೊಂದಿಗೆ ಸಭೆ ನಡೆಸಿ ರೈತರ ಸಮಸ್ಯೆ ಬಗೆಹರಿಸಿರುವ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಪಿಟಿ ಪರಮೇಶ್ವರ ನಾಯ್ಕ ಅವರ ಮೇಲೆ ಶಿಷ್ಟಾಚಾರ ಉಲ್ಲಂಘನೆಯ ದೂರು ಸಲ್ಲಿಸಿರುವ ಶಾಸಕ ಕೃಷ್ಣ ನಾಯಕ ಅವರ ನಡೆ ರೈತ ವಿರೋಧಿ ನೀತಿಯನ್ನು ತೋರಿಸುತ್ತದೆ ಎಂದರು. ಜವಬ್ದಾರಿಯುತ ಜನಪ್ರತಿನಿಧಿಯಾಗಿ ಸರಿಯಾಗಿ ಕಾರ್ಯನಿರ್ವಹಿಸಿದ್ದರೆ ರೈತರು ಪಕ್ಷಾತೀತವಾಗಿ ಮಾಜಿ ಸಚಿವರ ಬಳಿ ಏಕೆ ಹೋಗುತ್ತಿದ್ದರು ಎಂದು ಪ್ರಶ್ನಿಸಿದರು. ಪಕ್ಷ ಭೇಧ ಮರೆತು ಕೆರೆಯ ನೀರು ತುಂಬಿಸುವ ವಿಚಾರದಲ್ಲಿ ಮುಖ್ಯಮಂತ್ರಿಗಳನ್ನ ಭೇಟಿಯಾಗಲು ತೆರಳೋಣ ಎಂದರೂ ನಿರ್ಲಕ್ಷ್ಯ ವಹಿಸಿದ ಶಾಸಕರು ಸರ್ಕಾರದ ಪ್ರತಿನಿಧಿಯಾಗಿರುವ ಪರಮೇಶ ನಾಯ್ಕ ಅವರ ಮೇಲೆ ಅನಗತ್ಯ ದೂರು ಸಲ್ಲಿಸಿರುವುದು ಅವರ ಹತಾಶೆಗೆ ಸಾಕ್ಷಿಯಾಗಿದೆ ಎಂದು ಹೇಳಿದರು. ಮೊಸರಲ್ಲಿ ಕಲ್ಲು ಹುಡುಕುವುದನ್ನ ಬಿಟ್ಟು ಶಾಸಕರು ಕ್ಷೇತ್ರದ ಅಭಿವೃದ್ಧಿಯ ಕುರಿತು ಚಿಂತಿಸಲಿ ಎಂದು ಹೇಳಿದರು.

ಇಟಿಗಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಬಿ ಹನುಮಂತಪ್ಪ ಮಾತನಾಡಿ, ಸಂಪುಟ ದರ್ಜೆಯ ಸ್ಥಾನಮಾನ ಹೊಂದಿರುವ ಪಿಟಿ ಪರಮೇಶ್ವರನಾಯ್ಕ ಅವರಿಗೆ ಬೆಂಗಾವಲು ಕಲ್ಪಿಸುವುದು ಸರ್ಕಾರದ ನಿರ್ಧಾರ ಅದರ ಬಗ್ಗೆ ಅಪಸ್ವರ ಎತ್ತಿರುವ ಶಾಸಕರ ಹೇಳಿಕೆ ಖಂಡನೀಯವೆಂದು ಹೇಳಿದರು.

ಪ್ರಚಾರ ಸಮಿತಿಯ ಅಧ್ಯಕ್ಷರಾದ ಹನಕನಹಳ್ಳಿ ಹಾಲೇಶ್, ಕ್ಷೇತ್ರದ ಪ್ರತಿಯೊಬ್ಬ ಪ್ರಜೆಯೂ ಅಧಿಕಾರಿಗಳನ್ನ ಪ್ರಶ್ನಿಸುವ ಅಧಿಕಾರವಿದೆ ರೈತರು ತಮ್ಮ ಅಳಲನ್ನು ತೋಡಿಕೊಂಡಾಗ ಜವಬ್ದಾರಿಯುತ ವ್ಯಕ್ತಿಯಾಗಿ ಪಿಟಿ ಪರಮೇಶ್ವರ ನಾಯ್ಕ ಅವರು ಅಧಿಕಾರಗಳ ಸಭೆ ನಡೆಸಿ ಸಮಸ್ಯೆಯನ್ನ ಬಗೆಹರಿಸಿದ್ದಾರೆ ಎಂದರು.

ಬಿಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಪಿ ವಿಜಯಕುಮಾರ, ಮುಖಂಡರಾದ ದೂದನಾಯ್ಕ, ಕಾಗದ ಗೌಸ್ ಮುದ್ದೀನ್, ಕೆ ಶಾಂತನಗೌಡ, ಪಾಟೀಲ್ ಬಸವನಗೌಡ, ಬಿಚ್ಚುಗತ್ತಿ ಖಾಜಾ ಹುಸೇನ್, ಜ್ಯೋತಿ ಮಲ್ಲಣ್ಣ, ಚಂದ್ರನಾಯ್ಕ, ಗುರುವಿನ ರಾಜಣ್ಣ, ವಸಂತ, ಶಿವಕುಮಾರ ಗೌಡ ಉಪಸ್ಥಿತರಿದ್ದರು.

ಹೂವಿನಹಡಗಲಿ: ತಾಲೂಕು ಕಾಂಗ್ರೆಸ್ ವತಿಯಿಂದ ಜರುಗಿದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಬಿ ಹನುಮಂತಪ್ಪ ಮಾತನಾಡಿದರು.

'ಕರ್ನಾಟಕ ಮಹದಾಯಿ ನೀರು ತಿರುಗಿಸಿದೆ' !

ಪಣಜಿ: ಕರ್ನಾಟಕವು ಕಳಸಾ ಉಪನದಿಯಿಂದ ಕಣಕುಂಬಿಯಲ್ಲಿರುವ ಮಲಪ್ರಭಾ ಜಲಾನಯನ ಪ್ರದೇಶಕ್ಕೆ ನೀರನ್ನು ತಿರುಗಿಸುತ್ತಿದೆ ಎಂದು ಪರಿಸರವಾದಿ ಮತ್ತು ಮಹಾದಾಯಿ ಬಚಾವೋ ಅಭಿಯಾನದ ಕಾರ್ಯದರ್ಶಿ ರಾಜೇಂದ್ರ ಕೆರ್ಕರ್ ಆರೋಪಿಸಿದ್ದಾರೆ.

ಬುಧವಾರ ಪಣಜಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಕೆರ್ಕರ್, ನ್ಯಾಯಾಧೀಕರಣದ ಅಂತಿಮ ವಿಚಾರಣೆಯವರೆಗೆ ಮಹದಾಯಿ ನೀರನ್ನು ತಿರುಗಿಸುವುದಿಲ್ಲ ಅಥವಾ ಬಳಸುವುದಿಲ್ಲ ಎಂದು ಕರ್ನಾಟಕ ಈ ಹಿಂದೆ ನ್ಯಾಯಾಲಯಕ್ಕೆ ಭರವಸೆ ನೀಡಿತ್ತು. ಈ ಭರವಸೆಯ ಉಲ್ಲಂಘನೆಯೇ ಗೋವಾ 2018 ರಲ್ಲಿ ನ್ಯಾಯಾಂಗ ನಿಂದನೆ ಅರ್